ಅವರು ಅವರ ಅಭಿಪ್ರಾಯವನ್ನು ತೆಗೆದುಕೊಂಡು ಮಾಡಿದ್ದಾರೆ. ವಿಜಯನಗರ ಎರಡನೆಯ ಸ್ಟೀಲ್‌ಪ್ಲಾಂಟ್ ಬರುತ್ತಾ ಇದೆ. ಇದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿದ್ದೇವೆ. ಎಲ್ಲೆಲ್ಲಿ ಸೆನ್ಸಿಟಿವ್ ಇರುತ್ತದೆ ಅಲ್ಲಿ ಎಕ್ಸ್‌ಪರ್ಟ್ ಕಮಿಟಿ ಬೇಕಾಗುತ್ತದೆ. ಅಂಥ ಕಡೆಗಳಲ್ಲಿ ಎಕ್ಸ್‌ಪರ್ಟ್ ಕಮಿಟಿ ಮಾಡಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇವೆ. ಪ್ರೈವೇಟ್ ಜನ ಏನು ಕೈಗಾರಿಕೆಗಳನ್ನು ಮಾಡಲಿಕ್ಕೆ ಬರುತ್ತಾರೆ ಅವರ ಪ್ರಾಜೆಕ್ಟ್ ರಿಪೋರ್ಟ್ ಮೇಲೆ ನಾವು ಡಿಸಿಷನ್ ತೆಗೆದುಕೊಳ್ಳುತ್ತೇವೆ ಅಷ್ಟೆ.

ಅಧ್ಯಕ್ಷರು : ಮಾನ್ಯ ಸಚಿವರು ಉತ್ತರ ಕೊಡುವಾಗ ದಯಮಾಡಿ ಸಂಕ್ಷಿಪ್ತವಾಗಿ ಉತ್ತರ ಕೊಡಿ. ಉತ್ತರ ಕೊಡುವಾಗ ಹೀಗೆ ಹೆಚ್ಚು ಸಮಯವನ್ನು ತೆಗೆದುಕೊಂಡರೆ ನಾನು ಪ್ರಶ್ನೋತ್ತರವೇಳೆಯನ್ನು ನಡೆಸುವುದು ಬಹಳ ಕಷ್ಟವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮಂತ್ರಿಗಳು ವಿರೋಧಪಕ್ಷದ ನಾಯಕರಾಗಿದ್ದರು ಅದು ಅಭ್ಯಾಸಬಲ ಏನು ಮಾಡುವುದು.

ತುಮಕೂರು ನಗರಕ್ಕೆ ಒಳಚರಂಡಿ ವ್ಯವಸ್ಥೆ

373 - ಶ್ರೀ ಎನ್. ಶಿವಣ್ಣ (ತುಮಕೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಮಾಡುವ ಬಗ್ಗೆ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಬಂದಿದೆ.

ಆ) ಒಳಚರಂಡಿ ಯೋಜನೆ ಅಂದಾಜು ವೆಚ್ಚ ರೂ. 2,839-00 ಲಕ್ಷಗಳಿಗೆ ಸರ್ಕಾರವು ತಾಂತ್ರಿಕ ಮಂಜೂರಾತಿ ನೀಡಿದೆ. ಆಡಳಿತಾತ್ಮಕ ಮಂಜೂರಾತಿ ಮತ್ತು ಕಾಮಗಾರಿಯನ್ನು ಪ್ರಾರಂಭಿಸುವ ಮುನ್ನ ನಗರಸಭೆಯು ತನ್ನ ಪಾಲಿಗೆಯ 1/3 ಭಾಗವನ್ನು ಪಾವತಿಸಬೇಕು. ಮತ್ತು ಈ ಯೋಜನೆಗೆ ಹಣ ಒದಗಿಸಲು ಹುಡ್ಕೋ ನಿಗಮವು ತನ್ನ ಒಪ್ಪಿಗೆಯನ್ನು ನೀಡಬೇಕಾಗುತ್ತದೆ.

ಶ್ರೀ ಎಸ್. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಬಹಳ ಸಂತೋಷ. ಏಕೆಂದರೆ 2.839 ಲಕ್ಷ ರೂಪಾಯಿಗಳನ್ನು ಒಳಚರಂಡಿ ವ್ಯವಸ್ಥೆಗೆ ಮಂಜೂರಾತಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದರೊಳಗೆ ಮೂರನೆಯ ಒಂದು ಭಾಗ ಹಣವನ್ನು ಸರ್ಕಾರವೇ ಭರಿಸಿ ಒಳಚರಂಡಿ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಕೂಡ ಹಣವನ್ನು ಒದಗಿಸುತ್ತದೆ. ಮೂರನೆಯ ಒಂದು ಭಾಗ ಹಣವನ್ನು ಮುನಿಸಿಪಾಲಿಟಿಯವರು ಕೊಡಬೇಕು.

ಅಧ್ಯಕ್ಷರು : ಅವರು ಅದನ್ನೇ ಹೇಳಿದ್ದುದು. ಅಷ್ಟು ಕಟ್ಟುವುದಕ್ಕೂ ನಮಗೆ ಆಗುವುದಿಲ್ಲ, ಅದನ್ನೂ ನೀವೇ ಭರಿಸುತ್ತೀರಾ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ವೈಜನಾಥ ಪಾಟೀಲ್ : ಸಧ್ಯಕ್ಕಂತೂ ಇಲ್ಲ, ಇದನ್ನು ವಿಚಾರ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಒಂದು ಸಣ್ಣ ಪ್ರಶ್ನೆ.

ಅಧ್ಯಕ್ಷರು : ನೀವು ನಮ್ಮ ಸ್ನೇಹಿತರು. ಈ ಪ್ರಶ್ನೆ ಚಾಮರಾಜನಗರದ್ದೇ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಳಚರಂಡಿ ವ್ಯವಸ್ಥೆ ಬಗ್ಗೆ ಚಾಮರಾಜನಗರ ಪಟ್ಟಣಪ್ರದೇಶದಲ್ಲಿ ಮಾಡತಕ್ಕಂಥ ಯೋಜನೆ ಎಲ್ಲಾ ತಯರಾಗಿ ಅದು ಆಡಳಿತಾತ್ಮಕ ಅನುಮೋದನೆಗಾಗಿ ಬರಬೇಕಾಗಿದೆ. ಎಲ್ಲಾ ವ್ಯವಸ್ಥೆಯಾಗಿದೆ. ಆದ್ದರಿಂದ ಈಗ ತಮ್ಮ ಸರ್ಕಾರದವರು ಕೂಡಲೇ ಅದನ್ನು ಕಾರ್ಯಗತ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರೋ?

ಶ್ರೀ ವೈಜನಾಥ ಪಾಟೀಲ್ : ಒಂದನೇ ಮೂರರಷ್ಟು ಹಣವನ್ನು ಸ್ಥಳೀಯ ಸಂಸ್ಥೆಗಳು ಕೊಟ್ಟರೆ ಮಾಡುತ್ತೇವೆ. ಈ ಪಾಲಿಸಿ ತಮಗೂ ಕೂಡ ಅನ್ವಯವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಪುರಸಭೆಗಳಲ್ಲಿ ಒಂದು ಪೈಸೆ ತೆಗೆದುಕೊಳ್ಳುವುದಕ್ಕೂ ಅವರಲ್ಲಿ ಹಣ ಇಲ್ಲ. ಆದ್ದರಿಂದ ಅವರಿಗೆ ಹಣ ಕೊಡಿ ಎಂದು ಕೇಳುವುದು ಬಿಟ್ಟು ಸರ್ಕಾರ ಬೇರೆ ವಿಧಾನವನ್ನು ಅನುಸರಿಸಲಿ. ಈಗ ಅನೇಕ ಪುರಸಭೆಗಳಲ್ಲಿ ತಮ್ಮ ಕೆಲಗಸಗಾರರಿಗೆ ಸಂಬಳ ಕೊಡುವುದಕ್ಕೂ ಹಣ ಇಲ್ಲ. ಆದ್ದರಿಂದ ನೀವು ಪುರಸಭೆಗಳಿಗೆ ಹಣ ಕೊಡಿ ನಾವು ನೀರು ಕೊಡುತ್ತೇವೆ ಎಂದು ಹೇಳಿದರೆ ಅದು ಸಾಧ್ಯವಿಲ್ಲ. ದಯಮಾಡಿ ಸರ್ಕಾರ ವಿಶೇಷವಾದಂಥ ತೀರ್ಮಾನ ತೆಗೆದುಕೊಂಡು ಮಾಡಬೇಕು. ಏಕೆಂದರೆ ಪುರಸಭೆ ಹಣ ಕೊಡುವುದನ್ನು ನಂಬುವುದಕ್ಕೆ ಆಗುವುದಿಲ್ಲ. ಪುರಸಭೆಯ ಹಣ ನಂಬಿದರೆ ನಾವು ನೀರು ಕುಡಿಯುವುದಕ್ಕೂ ಆಗುವುದಿಲ್ಲ, ನೀರೂ ಬರುವುದಿಲ್ಲ. ಆದ್ದರಿಂದ ಸರ್ಕಾರ ಒಮ್ಮೆ ನಿರ್ಧಾರ ಮಾಡಿಕೊಂಡು ತಾವೇ ಹಣ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ವೈಜನಾಥ ಪಾಟೀಲ್ : ಇಡೀ ರಾಜ್ಯದಲ್ಲಿ ಎಷ್ಟೋ ಪುರಸಭೆಗಳು ಇವೆ, ಅವುಗಳೆಲ್ಲದರ ಸಲುವಾಗಿ ಒಂದು ನೀತಿಯನ್ನು ಮಾಡಬೇಕಾಗುತ್ತದೆ. ನೀವು ಹೇಳಿದ್ದುದು ಇದು ಒಂದೇ ಪುರಸಭೆ ಅಲ್ಲ. ಇದರ ಬಗ್ಗೆ ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಕೊರಗ ಜನಾಂಗದ ಅಭಿವೃದ್ಧಿ ಬಗ್ಗೆ

306 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಗ ಜನಾಂಗದವರ ಅಭಿವೃದ್ಧಿ ಬಗ್ಗೆ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳೇನು;

ಆ) ಹಾಗಿದ್ದಲ್ಲಿ ಅವರ ಕುಲ-ಕಸುಬು ಪರಂಪರೆಯನ್ನು ಅವಲಂಬಿಸಿ ಶಿಕ್ಷಣ, ತಾಂತ್ರಿಕ ಶಿಕ್ಷಣ ಇತ್ಯಾದಿಗಳ ಬಗ್ಗೆ ರೂಪುರೇಷೆ ಏನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಆದಿವಾಸಿ ಜನಾಂಗವಾದ ಕೊರಗದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು 1994-95ನೇ ಸಾಲಿನಿಂದ 4 ವರ್ಷದ ಅವಧಿಯಲ್ಲಿ ಒಟ್ಟು 274.649 ಲಕ್ಷಗಳ ಅಂದಾಜು ವೆಚ್ಚದಲ್ಲಿ ಹಂತಹಂತವಾಗಿ ಜಿಲ್ಲೆಯ ಜಿಲ್ಲಾ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

1) ಕೊರಗರು ವಾಸಿಸುವ ಮನೆಗಳ ದುರಸ್ತಿ
2) ವಸತಿ ನಿರ್ಮಾಣ
3) ಒಂದು ಎಕರೆಗಿಂತ ಹೆಚ್ಚಿನ ಹಿಡುವಳಿದಾರರಿಗೆ ನೀರಾವರಿ ಸೌಲಭ್ಯ
4) ನಿರುದ್ಯೋಗಿಗಳಿಗೆ ತರಬೇತಿ
5) ಮನೆಯಿದ್ದವರಿಗೆ ವಿದ್ಯುತ್ ಕಲ್ಪಿಸುವುದು